ಫಸಲ್‌ಗಳ ಸ್ಥಿತಿ.—ತರೀಕೆರೆ, ಕೊಪ್ಪ, ಚಿಕ್ಕಮಗಳೂರು ವ ಮೂಡಗೆರೆ ತಾಲ್ಲೂಕುಗಳಲ್ಲಿ ಸಾಧಾರಣವಾಗಿಯೂ ಕಡೂರು ತಾಲ್ಲೂಕಿನಲ್ಲಿ ವಳ್ಳೀ ಸ್ಥಿತಿಯಲ್ಲೂ ಇವೆ.

ಕಾಲಸ್ಥಿತಿ.—ಚನ್ನಾಗಿಧೆ.

ಜನಾರೋಗ್ಯ.—ಚಿಕ್ಕಮಗಳೂರು ವ ಕೊಪ್ಪ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಪಿಡುಬು ಬಹಳ ಬಲವಾಗಿದೆ, ಕೊಪ್ಪ, ಚಿಕ್ಕಮಗಳೂರು ವ ಕಡೂರು ತಾಲ್ಲೂಕುಗಳಲ್ಲಿ ಜ್ವರ ವ್ಯಾಪಿಸಿತ್ತು.

ಕಾಲ್ನಡೆ.—ಕಾಲ್ನಡೆಗಳ ಸ್ಥಿತಿ ಸರ್ವತ್ರ ಚನ್ನಾಗಿಧೆ. ಈ ತೆಂಗಳೊಳಗೆ 412 ಆ ಹಿಂದಿನ ತಿಂಗಳಲ್ಲಿ 1,591 ಕಾಲ್ನಡೆಗಳು ಮೃತಪಟ್ಟವು. ನೀರು ಮತ್ತು ಮೇವು ಸಾಧಾರಣವಾಗಿಧೆ.

ಜಮ್ಮಿ.—ಸಾಗುವಳೀ ಬಗ್ಗಾಗಿ 144—12—0 ರೂಪಾಯಿಗಳ ಕಂದಾಯವುಳ್ಳ ಜಮ್ಮಿಗಳು ತೆಗದುಕೊಳ್ಳಲ್ಪಟ್ಟವು.

ನಿರಖು.—ತಗ್ಗು ತಲಿಧೆ.

ಬಿ. ಕೃಷ್ಣಯ್ಯಂಗಾರ್,
ಫಾರ್ ಡಿಪ್ಯುಟಿ ಕಮ್ಮಿಷನರ್.

ಗವರ್ಮೆಂಟ್ ತೋಟಗಳ ಇಲಾಖಾ.

ನೋಟೀಸ್.

ತಾರೀಖು 15ನೇ ಮಾರ್ಚೀ 1887.

ಮಾವು, ಹಲಸು, ಪನ್ನೇರಳೆ ವ ಲಕೋಟೆ ಮುಂತಾದ ಗಿಡಗಳಲ್ಲಿರುವ ಫಸಲು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ವ ತಾರೀಖುಗಳಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಲಾಲ್‌ಬಾಗ್— ಸ್ ೧೮೮೭ನೇ ಇಸವಿ ಏಪ್ರಿಲ್ ತಾರೀಖು 4ನೇ ಸೋಮವಾರ ಮಧ್ಯಾನ್ಹ 12 ಘಂಟೆಗೆ ಸೂಪರ್‌ಟೆಂಡೆಂಟರ ವರ ಆಫೀಸಿನಲ್ಲಿ.

ಕಬ್ಬನ್‌ಪಾರ್ಕ್—ಸ್ ೧೮೮೭ನೇ ಇಸವಿ ಏಪ್ರಿಲ್ ತಾರೀಖು 5ನೇ ಮಂಗಳವಾರ ಪ್ರಾತಃಕಾಲ 8 ಘಂಟೆಗೆ.

ಅರಮನೆ ತೋಟ—(ಗ್ಯಾರಟ್‌ಸನ್ನಜೇಬರ ಮಾವಿನ ತೋಪು ಸಹ) ಸ್ ೧೮೮೭ನೇ ಇಸವಿ ಏಪ್ರಿಲ್ ತಾರೀಖು 6ನೇ ಗುರುವಾರ ಪ್ರಾತಃಕಾಲ 8 ಘಂಟೆಗೆ.

ಜೆ. ಕ್ಯಾಮರ್ಜ್,
ಸೂಪರ್‌ಟೆಂಡೆಂಟ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ದರ್ಮಾರ್ಥವಾಗಿ ಗವರ್ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿ ರೂ. 8—8—0; ಬಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.